# ಕರ್ನಾಟಕವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 389
ಮಾನ್ಯ ಸದಸ್ಯರ ಹೆಸರು : ಶ್ರೀ ಕಿಶೋರ್‌ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕೇತ್ರ)
ಉತ್ತರಿಸಬೇಕಾದ ದಿನಾಂಕ : 10.03.2025
ಉತ್ತರಿಸಬೇಕಾದ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

| ಕ್ರ ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಕಳೆದ ಒಂದು ವರ್ಷದಲ್ಲಿ ಸಾವನ್ನಪ್ಪಿದ ಬಾಣಂತಿಯರು ಮತ್ತು ನವಜಾತ ಶಿಶುಗಳ ಸಂಖ್ಯೆ ಎಷ್ಟು: ಯಾವ ಜಿಲ್ಲೆಯಲ್ಲಿ ಅತೀ ಹೆಚ್ಚು ಸಾವು ಸಂಭವಿಸಿದ ಜಿಲ್ಲೆ ಯಾವುದು: (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಕಳೆದ ಒಂದು ವರ್ಷದಲ್ಲಿ 442 ಬಾಣಂತಿಯರು ಸಾವಿಗೀಡಾಗಿದ್ದಾರೆ. ಅತೀ ಹೆಚ್ಚು ಸಾವು ಸಂಭವಿಸಿದ ಜಿಲ್ಲೆ ಬೆಂಗಳೂರು ನಗರ ಜಿಲ್ಲೆ ಆಗಿದ್ದು, 82 ತಾಯಿ ಮರಣಗಳು ಸಂಭವಿಸಿರುತ್ತವೆ. ಏಪ್ರಿಲ್ 2024 ರಿಂದ ಜನವರಿ 2025 ರ ವರೆಗೆ ರಾಜ್ಯದಲ್ಲಿ 4,901 ನವಜಾತ ಶಿಶುಗಳು ಮರಣಗಳು HMIS ತಂತ್ರಾಂಶಲ್ಲಿ ವರದಿಯಾಗಿದೆ. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1ರಲ್ಲಿ** ನೀಡಲಾಗಿದೆ. |
| ಆ) | ಬಾಣಂತಿಯರು ಸಾವನ್ನಪ್ಪಿರುವುದಕ್ಕೆ ನಿರ್ದಿಷ್ಟ ಕಾರಣಗಳೇನು ವೈದ್ಯರ ನಿರ್ಲಕ್ಷತೆಯೇ ಅಥವಾ ಔಷಧಿಯ ಅಡ್ಡಪರಿಣಾಮವೇ ಎಂಬ ಬಗ್ಗೆ ತನಿಖೆ ನಡೆಸಲಾಗಿದೆಯೇ, ಹಾಗಿದ್ದಲ್ಲಿ, ಈ ಬಗ್ಗೆ ತಪ್ಪಿತಸ್ಥರ ಮೇಲೆ ಯಾವ ಕ್ರಮ ಜರುಗಿಸಲಾಗಿದೆ; | ಏಪ್ರಿಲ್ 2024 ರಿಂದ ಫೆಬ್ರುವರಿ 2025 ವರೆಗಿನ ಬಾಣಂತಿ ಸಾವುಗಳಿಗೆ ನಿರ್ದಿಷ್ಟ ಕಾರಣ ತಿಳಿಯಲು ರಾಜ್ಯ ಮಟ್ಟದ ಸಮಿತಿಯಿಂದ ಆಡಿಟ್ (ತನಿಖೆ) ನಡೆಸಲಾಗಿರುತ್ತದೆ. ಕಾರಣಗಳಲ್ಲಿ ಔಷಧಿಯ ಅಡ್ಡ ಪರಿಣಾಮವು, ವೈದ್ಯರು ಮತ್ತು ಸಿಬ್ಬಂದಿಯವರ ನಿರ್ಲಕ್ಷತೆಯು ಸೇರಿದಂತೆ ಕಾರಣಗಳನ್ನು ವಿಶ್ಲೇಷಿಸಿದೆ ಹಾಗೂ ಕೈಗೊಂಡ ಕ್ರಮವನ್ನು **ಅನುಬಂಧ-2 ರಲ್ಲಿ** ನೀಡಲಾಗಿದೆ. |
| ಇ) | ಮೃತಬಾಣಂತಿಯರಕುಟುಂಬಕ್ಕೆ ಸರ್ಕಾರದಿಂದಎಷ್ಟುಪರಿಹಾರ ನೀಡಲಾಗಿದೆ: ಮೃತಬಾಣಂತಿಯರ ಮಕ್ಕಳಪೋಷಣೆ, ಶಿಕ್ಷಣಕ್ಕೆಸರ್ಕಾರ ಏನುಕ್ರಮಜರುಗಿಸಲಾಗಿದೆ: (ಜಿಲ್ಲಾವಾರುವಿವರನೀಡುವುದು) | ಬಳ್ಳಾರಿ ಜಿಲ್ಲೆಯಲ್ಲಿ ಔಷಧಿಯ ಅಡ್ಡ ಪರಿಣಾಮದಿಂದ ಸಂಭವಿಸಿದ ಐದು (5) ಬಾಣಂತಿಯರ ಕುಟುಂಬಕ್ಕೆ ತಲಾ ರೂ. 5.00 ಲಕ್ಷಗಳ ಪರಿಹಾರಧನವನ್ನು ವಿತರಿಸಲಾಗಿರುತ್ತದೆ. ಮೃತ ಬಾಣಂತಿಯರ ಮಕ್ಕಳ ಪೋಷಣೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಇಲಾಖೆಯೊಂದಿಗೆ ಸಮಾಲೋಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. |
| ಈ) | ಮುಂದಿನದಿನಗಳಲ್ಲಿ ಈ ರೀತಿಯಘಟನೆಗಳುಮರುಕಳಿಸದಂತೆ ತಡೆಯಲುಸರ್ಕಾರಕೈಗೊಂಡಿರುವ ಕ್ರಮಗಳೇನು? | ಮುಂದಿನ ದಿನಗಳಲ್ಲಿ ಈ ರೀತಿಯ ಘಟನೆಗಳನ್ನು ಮರುಕಳಿಸದಂತೆ ತಡೆಯಲು ಕೈಗೊಂಡಿರುವ ಕ್ರಮಗಳನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ. |

**ಸಂಖ್ಯೆ: ಆಕುಕ 13 ಎಸ್.ಟಿ.ಕ್ಯೂ 2025**

**(ದಿನೇಶ್ ಗುಂಡೂರಾವ್)**
ಆರೋಗ್ಯಮತ್ತುಕುಟುಂಬಕಲ್ಯಾಣಸಚಿವರು

**ಅನುಬಂಧ-01**

## ಜಿಲ್ಲಾವಾರು ನವಜಾತ ಶಿಶು ಮರಣಗಳು
## (ಏಪ್ರಿಲ್ 2024 ರಿಂದ ಜನವರಿ 2025 ರ ವರೆಗೆ) ದತ್ತಾಂಶ-HMIS

| ಕ್ರಮ ಸಂಖ್ಯೆ | ಜಿಲ್ಲಾ | ನವಜಾತ ಶಿಶುಗಳ ಮರಣಗಳು |
|---|---|---|
| 1 | ಬಾಗಲಕೋಟೆ | 59 |
| 2 | ಬಳ್ಳಾರಿ | 285 |
| 3 | ಬೆಳಗಾವಿ | 313 |
| 4 | ಬೆಂಗಳೂರು ಗ್ರಾಮಾಂತರ | 15 |
| 5 | ಬೆಂಗಳೂರು ನಗರ | 474 |
| 6 | ಬೀದರ್ | 169 |
| 7 | ಚಾಮರಾಜನಗರ | 31 |
| 8 | ಚಿಕ್ಕಬಳ್ಳಾಪುರ | 48 |
| 9 | ಚಿಕ್ಕಮಗಳೂರು | 14 |
| 10 | ಚಿತ್ರದುರ್ಗ | 169 |
| 11 | ದಕ್ಷಿಣ ಕನ್ನಡ | 224 |
| 12 | ದಾವಣಗೆರೆ | 235 |
| 13 | ಧಾರವಾಡ | 322 |
| 14 | ಗದಗ | 132 |
| 15 | ಹಾಸನ | 165 |
| 16 | ಹಾವೇರಿ | 63 |
| 17 | ಕಲಬುರಗಿ | 235 |
| 18 | ಕೊಡಗು | 25 |
| 19 | ಕೋಲಾರ | 65 |
| 20 | ಕೊಪ್ಪಳ | 249 |
| 21 | ಮಂಡ್ಯ | 100 |
| 22 | ಮೈಸೂರು | 464 |
| 23 | ರಾಯಚೂರು | 371 |
| 24 | ರಾಮನಗರ | 10 |
| 25 | ಶಿವಮೊಗ್ಗ | 181 |
| 26 | ತುಮಕೂರು | 136 |
| 27 | ಉಡುಪಿ | 24 |
| 28 | ಉತ್ತರ ಕನ್ನಡ | 43 |
| 29 | ವಿಜಯನಗರ | 19 |
| 30 | ವಿಜಯಪುರ | 196 |
| 31 | ಯಾದಗಿರಿ | 65 |

*-ನವಜಾತ ಶಿಶುಗಳ ಮರಣದ ವರದಿ ಸಾವು ಸಂಭವಿಸಿದ ಸ್ಥಳದ ಆಧಾರದ ಮೇಲೆ ಮಾಡಲಾಗಿದೆ

**ಉಪ ನಿರ್ದೇಶಕರು- ಮಕ್ಕಳ ಆರೋಗ್ಯ**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು**
**ಬೆಂಗಳೂರು**

## ಅನುಬಂಧ-1

| ಜಿಲ್ಲಾವಾರು ಕಳೆದ ಒಂದು ವರ್ಷದಲ್ಲಿ (ಮಾರ್ಚ್ -2024 ರಿಂದ ಫೆಬ್ರುವರಿ-2025) ತಾಯಿ ಮರಣ ಸಂಖ್ಯೆ | | |
|---|---|---|
| ಕ್ರ.ಸಂ | ಜಿಲ್ಲೆ | ತಾಯಿ ಮರಣ ಸಂಖ್ಯೆ |
| 1 | ಬೆಂಗಳೂರು ನಗರ | 82 |
| 2 | ಬೆಳಗಾವಿ | 38 |
| 3 | ಬಳ್ಳಾರಿ | 36 |
| 4 | ಧಾರವಾಡ | 35 |
| 5 | ದಾವಣಗೆರೆ | 31 |
| 6 | ಕಲಬುರಗಿ | 26 |
| 7 | ರಾಯಚೂರು | 24 |
| 8 | ಶಿವಮೊಗ್ಗ | 21 |
| 9 | ಮೈಸೂರು | 16 |
| 10 | ಕೊಪ್ಪಳ | 15 |
| 11 | ಬಾಗಲಕೋಟೆ | 12 |
| 12 | ಗದಗ | 11 |
| 13 | ಹಾವೇರಿ | 11 |
| 14 | ದಕ್ಷಿಣ ಕನ್ನಡ | 10 |
| 15 | ಹಾಸನ | 10 |
| 16 | ತುಮಕೂರು | 10 |
| 17 | ಬೀದರ್ | 9 |
| 18 | ಚಿತ್ರದುರ್ಗ | 8 |
| 19 | ಯಾದಗಿರಿ | 8 |
| 20 | ಕೋಲಾರ | 6 |
| 21 | ಉತ್ತರ ಕನ್ನಡ | 5 |
| 22 | ವಿಜಯನಗರ | 4 |
| 23 | ರಾಮನಗರ | 3 |
| 24 | ವಿಜಯಪುರ | 3 |
| 25 | ಚಿಕ್ಕಮಗಳೂರು | 2 |
| 26 | ಕೊಡಗು | 2 |
| 27 | ಮಂಡ್ಯ | 2 |
| 28 | ಚಾಮರಾಜನಗರ | 1 |
| 29 | ಚಿಕ್ಕಬಳ್ಳಾಪುರ | 1 |
| 30 | ಬೆಂಗಳೂರು ಗ್ರಾ. | 0 |
| 31 | ಉಡುಪಿ | 0 |
| | ಒಟ್ಟು | 442 |

ಉಪ [illegible]
ಆರೋಗ್ಯ ಮತ್ತು ಕು.ಕ. [illegible]
ಬೆಂಗಳೂರು-560 009



No. HFW/13/STQ/2025-FW-HEALTH AND FAMILY WELFARE SEC (Computer No. 1700138)

# <u>ಅನುಬಂಧ-2</u>

ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ 2024ರ ನವೆಂಬರ್ ತಿಂಗಳಲ್ಲಿ ಒಟ್ಟು 5 ತಾಯಿ ಮರಣ ವರದಿಯಾಗಿದ್ದು, ನವೆಂಬರ್ 9, 10 ಮತ್ತು 11 ರಂದು ಜಿಲ್ಲಾ ಆಸ್ಪತ್ರೆಯಲ್ಲಿ ಸಿಸೇರಿಯನ್ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ನಡೆದ ಶಸ್ತ್ರಚಿಕಿತ್ಸೆ ನಂತರ ಈ ಸಾವುಗಳು ಸಂಭವಿಸಿವೆ ಎಂದು ವರದಿಯಾಗಿದೆ.

ಬಳ್ಳಾರಿ ಜಿಲ್ಲಾ, ಆಸ್ಪತ್ರೆಯಲ್ಲಿ ಹಠಾತ್ ತಾಯಂದಿರ <u>ಘಟನೆಯ ನಂತರ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿವೆ.</u>

1. ಸದರಿ Ringer Lactate IV Fluid ದ್ರಾವಣದ ಮಾದರಿಗಳನ್ನು ಪಡೆದು ವಿಶ್ಲೇಷಣೆಗೆ ಕಳುಹಿಸುವಲ್ಲಿ ನಿರ್ಲಕ್ಷತೆ ತೋರಿಸಿರುವ ಕಾರಣದಿಂದ ಔಷಧ ನಿಯಂತ್ರಕರಾದ ಡಾ. ಎಸ್. ಉಮೇಶ್ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿದೆ ಹಾಗೂ ಬಳ್ಳಾರಿ ಜಿಲ್ಲೆಯ ಕಾರ್ಯಾವ್ಯಾಪ್ತಿಗೆ ಸಂಬಂಧಿಸಿದ ಇಲಾಖೆಯ 3 ಅಧಿಕಾರಿಗಳ ವಿರುದ್ಧ ಔಷಧ ಉಗ್ರಾಣ ಹಾಗೂ ಜಿಲ್ಲಾ ಆಸ್ಪತ್ರೆಯಿಂದ ಸದರಿ ಔಷಧಿ ಮಾದರಿಗಳನ್ನು ಪಡೆದು ವಿಶ್ಲೇಷಣೆಗೆ ಕಳುಹಿಸುವಲ್ಲಿ ನಿರ್ಲಕ್ಷತೆ ತೋರಿಸಿರುವ ಕಾರಣದಿಂದ ಇಲಾಖಾ ವಿಚಾರಣೆ ಪ್ರಕ್ರಿಯೆ ಪ್ರಾರಂಬಿಸಲಾಗಿದೆ.

2. ವ್ಯವಸ್ಥಾಪಕ ನಿರ್ದೇಶಕರು (KSMSCL) ಇವರ ಮೇಲೆ ಇಲಾಖಾ ವಿಚಾರಣೆಗೆ ಕ್ರಮ ಕೈಗೊಳ್ಳಲಾಗಿದೆ.

3. M/s.Paschim Banga Pharmaceuticals ಸಂಸ್ಥೆಯ ಸರಬರಾಜು ಮಾಡಿರುವ ringer lactate ಒಳಗೊಂಡು ಇನ್ನಿತರೇ ಔಷಧಗಳು ಗುಣ ವಿಶ್ಲೇಷಣೆಯಲ್ಲಿ NSQ ಎಂದು ಘೋಷಣೆಯಾಗಿರುವುದರಿಂದ ಸದರಿ ಸಂಸ್ಥೆ ಪೂರೈಕೆ ಮಾಡಿರುವ ಎಲ್ಲಾ 7 ಔಷಧಗಳನ್ನು ಮುಂದಿನ ಆದೇಶದವರೆಗೆ ಬಳಕೆಗೆ ವಿತರಿಸದಂತೆ ಎಲ್ಲಾ ಜಿಲ್ಲಾ ಔಷಧ ಉಗ್ರಾಣದ ಪ್ರಭಾರಧಾರಕರಿಗೆ ದಿನಾಂಕ: 30.11.2024 ರಂದು ಸೂಚಿಸಲಾಗಿರುತ್ತದೆ.

4. ಅಲ್ಲದೇ, ಈ ಸಂಸ್ಥೆಯು ಸರಬರಾಜು ಮಾಡಿದ 3 ಔಷಧಿಗಳನ್ನು ಕಪ್ಪು ಪಟ್ಟಿಗೆ ಸೇರಿಸಿ ಆದೇಶಿಸಿಲಾಗಿದೆ. ಅಲ್ಲದೇ, ಉಳಿಕೆ ಔಷಧಿಗಳನ್ನು ಹಾಗೂ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸುವ ಕ್ರಮ ಪ್ರಗತಿಯಲ್ಲಿದೆ.

5. M/s. Paschim Banga Pharmaceuticals ಸಂಸ್ಥೆಯವರು ಒಟ್ಟು 196ಬ್ಯಾಚ್ ಆರ್ ಎಲ್ ದ್ರವ್ಯವನ್ನು ಸರಬರಾಜು ಮಾಡಿದ್ದು ಅವೆಲ್ಲಗಳನ್ನು ಆಹಾರ ಸುರಕ್ಷತೆ ಮತ್ತ ಔಷಧ ನಿಯಂತ್ರಣಾ ಇಲಾಖೆಯಿಂದ ಮತ್ತೊಮ್ಮೆ ಗುಣಮಟ್ಟ ಪರಿಶೀಲಿಸಲಾಗಿದ್ದು ಅದರಂತೆ ಒಟ್ಟು 113 ಬ್ಯಾಚ್ ಕಳಪೆ ಗುಣಮಟ್ಟ ಎಂದು ವರದಿಯಾಗಿರುತ್ತದೆ. ಈ ವರದಿಗಳ ಆಧಾರದ ಮೇಲೆ ಇಲಾಖೆಯಿಂದ ಸದರಿ ಸಂಸ್ಥೆಯ ವಿರುದ್ಧ ಈಗಾಗಲೇ 12 ಪ್ರಕರಣಗಳಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ ಹಾಗೂ ಉಳಿಕೆ ಕ್ರಿಮಿನಲ್ ಮೊಕದ್ದಮೆ ಹೂಡುವ ಕಾರ್ಯ ಪ್ರಗತಿಯಲ್ಲಿರುತ್ತದೆ.

6. Ringer Lactate IV Fluid ನ್ನು ಕೆ.ಎಸ್.ಎಂ.ಎಸ್.ಸಿ.ಎಲ್ ಗೆ ಸರಬರಾಜು ಮಾಡಿದ ಕಂಪನಿಯು ಪಶ್ಚಿಮ ಬಂಗಾಳ ರಾಜ್ಯದಲ್ಲಿದ್ದು ಸದರಿ ಕಂಪನಿಯು ಆ ರಾಜ್ಯದ ಔಷಧ ನಿಯಂತ್ರಣ ಇಲಾಖೆ ಮತ್ತು DCGI ರವರ ಜಂಟಿ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ. ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕರ್ನಾಟಕ ಸರ್ಕಾರ ಇವರು ಕೇಂದ್ರ ಔಷದ ನಿಯಂತ್ರಕರು ಇವರಿಗೆ ಸದರಿ ಸಂಸ್ಥೆಯ ವಿರುದ್ಧ ಕ್ರಮ ಜರುಗಿಸಲು ತಮ್ಮ ಪತ್ರದ ಮುಖಾಂತರ ಕೋರಿದ್ದು ಹಾಗೂ ದಿನಾಂಕ: 04.12.2024 ರಿಂದ 06.12.2024 ರ ವರೆಗೆ ಕರ್ನಾಟಕ ಹಾಗೂ ಪಶ್ಚಿಮ ಬಂಗಾಳ ರಾಜ್ಯದ ಔಷಧ ನಿಯಂತ್ರಣ ಇಲಾಖೆ ಅಧಿಕಾರಿಗಳು ಹಾಗು Central Drugs Standard Control Organization (CDSCO) ಇವರುಗಳು ಔಷಧದ ಉತ್ಪಾದನ ಸ್ಥಳದಲ್ಲಿ ಜಂಟಿ ತನಿಖೆಯನ್ನು ನಡೆಸಿ ಅಲ್ಲಿರುವಂತಹ ಅಸಮರ್ಪಕ ನಿರ್ವಹಣೆಯನ್ನು ಗುರುತಿಸಿರುತ್ತಾರೆ, ನಂತರ ಪಶ್ಚಿಮ ಬಂಗಾಳ ರಾಜ್ಯದ ಔಷಧ ನಿಯಂತ್ರಣ ಇಲಾಖೆ ಅಧಿಕಾರಿಗಳು ಔಷಧ ಉತ್ಪಾದನೆ ಮಾಡದಂತೆ ಉತ್ಪಾದಕರಿಗೆ ನೋಟಿಸು ನೀಡಿ ಉತ್ಪಾದನೆ ಮಾಡುವುದನ್ನು ಸ್ಥಗಿತಗೊಳಿಸಿರುತ್ತಾರೆ.

**ರಕ್ತ ಹೀನತೆ, ಅಪೌಷ್ಠಿಕತೆಯಿಂದ ಹಾಗೂ ಇತರೆ ತಡೆಗೊಳ್ಳಬಹುದಾದ ಬಾಣಂತಿ ಸಾವುಗಳನ್ನು ನಿಯಂತ್ರಿಸಲು ಈ ಕೆಳಕಂಡ ಕ್ರಮಗಳನ್ನು ಸರ್ಕಾರವು ಕೈಗೊಂಡಿದೆ.**

1. ತಾಯಿ ಮರಣ ಆಡಿಟ್ ಗಳನ್ನು ಕಡ್ಡಾಯವಾಗಿ ರಾಜ್ಯ ಮಟ್ಟದ ತಾಂತ್ರಿಕ ಸಮಿತಿಯಿಂದ ವಿಶ್ಲೇಷಣೆಯನ್ನು ಮಾಡಲಾಗುತ್ತಿದೆ.

2. ಎಲ್ಲಾ ಸರ್ಕಾರಿ ಮತ್ತು ಖಾಸಗಿ ಆರೋಗ್ಯ ಸಂಸ್ಥೆಗಳ ವೈದ್ಯರುಗಳಿಗೆ ಮತ್ತು ಸಿಬ್ಬಂದಿಗಳಿಗೆ ಆಗ್ಗಿಂದಾಗ ಕಂಡು ಬರುವ ತಾಂತ್ರಿಕತೆಯಲ್ಲಿ ಅನುಷ್ಠಾನದಲ್ಲಿ ಮತ್ತು ಸಮನ್ವಯದಲ್ಲಿನ ಕೊರತೆಗಳನ್ನು ನಿವಾರಿಸಲು ರಾಜ್ಯ ಮಟ್ಟದಿಂದ ಮತ್ತು ಜಿಲ್ಲಾ ಮಟ್ಟದಿಂದ ಮಾರ್ಗದರ್ಶನ ನೀಡಲಾಗುತ್ತಿದೆ.

3. ಗರ್ಭಿಣಿ ಮತ್ತು ಬಾಣಂತಿ ಆರೈಕೆಗೆ ಅವಶ್ಯವಿರುವ ಔಷಧಿಗಳು ಮತ್ತು ಉಪಕರಣಗಳನ್ನು ಸರಬರಾಜು ಮಾಡಲಾಗುತ್ತಿದೆ.

4. ಕೆಳಹಂತದ ಆಸ್ಪತ್ರೆಗಳಿಂದ ಮೇಲ್ಹಂತದ ಆಸ್ಪತ್ರೆಗಳಿಗೆ ಶಿಫಾರಸ್ಸು ಮಾಡುವ ಸಮಯದಲ್ಲಿ ಅನುಸರಿಸಬೇಕಾದ ಪದ್ಧತಿಯನ್ನು (Transfer protocol) ಮೇಲ್ವಿಚಾರಣೆ ಮಾಡಲಾಗುತ್ತಿದೆ. ಅವಶ್ಯವಿರುವ Transfer protocol ಗಳನ್ನು ಪುನರ್ ಪರಿಶೀಲಿಸಲಾಗುತ್ತಿದೆ. ಎನ್. ಎ. ಎಸ್ ಗಾರ್ಮೆಂಟ್ ಗಳು ಆಸ್ಪತ್ರೆಗಳಲ್ಲಿ ಮತ್ತು ಮೇಲ್ಹಂತದ ಆಸ್ಪತ್ರೆಗಳಿಗೆ ಅಂಬುಲೆನ್ಸ್‌ಗಳಲ್ಲಿ ಶಿಫಾರಸ್ಸುಗೊಳ್ಳುವ ಸಮಯದಲ್ಲಿ ಬಳಸಲು ಕಡ್ಡಾಯಗೊಳಿಸಲಾಗಿದೆ.

5. ಎಲ್ಲಾ ವರ್ಗದ ಗರ್ಭಿಣಿಯರಿಗೆ ಮೊದಲ 7 ತಿಂಗಳ ಗರ್ಭಾವಸ್ಥೆಯಲ್ಲಿ ತಿಂಗಳಿಗೆ ಕನಿಷ್ಠ 1 ಬಾರಿ, 8 ನೇ ತಿಂಗಳಲ್ಲಿ 2 ಬಾರಿ ಹಾಗೂ 9 ನೇ ತಿಂಗಳಲ್ಲಿ ಪ್ರತಿ ವಾರಕ್ಕೊಮ್ಮೆ ಪ್ರಸವ ಪೂರ್ವ ಗರ್ಭಿಣಿ ತಪಾಸಣೆಯನ್ನು ಕಡ್ಡಾಯಗೊಳಿಸಲಾಗಿದೆ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಇದರ ಕುರಿತು ಅನುಷ್ಠಾನವನ್ನು ಮೇಲ್ವಿಚಾರಣೆ ನಡೆಸಲು ಆದೇಶಿಸಲಾಗಿರುತ್ತದೆ.

6. ಎಲ್ಲಾ ವರ್ಗದ ಗರ್ಭಿಣಿಯರಿಗೆ 8 ನೇ ತಿಂಗಳಿನ ಅಂತ್ಯಕ್ಕೆ ಹೆರಿಗೆ ಸಿದ್ಧತೆಯ ಬಗ್ಗೆ ಸಮಾಲೋಚನೆ ನಡೆಸಿ ಹೆರಿಗೆಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ.

ಉಪ ನಿರ್ದೇಶಕರು (ತಾಯಿ ಆರೋಗ್ಯ)

7. ಸಹಜ ಹೆರಿಗೆಯಾದ ಪ್ರಕರಣದಲ್ಲಿ ಕನಿಷ್ಠ 3 ದಿವಸಗಳ ಆಸ್ಪತ್ರೆಯ ದಾಖಲು ಮತ್ತು ಸಿಜೇರಿಯನ್ ಶಸ್ತ್ರ ಚಿಕಿತ್ಸೆ ನಂತರ ಕನಿಷ್ಠ 7 ದಿನಗಳ ವರೆಗೂ ಆಸ್ಪತ್ರೆಗಳಲ್ಲಿ ದಾಖಲಾತಿಯನ್ನು ಕಡ್ಡಾಯಗೊಳಿಸಲಾಗಿರುತ್ತದೆ.

8. ಆಸ್ಪತ್ರೆಯ ಮುಖ್ಯ ಆಡಳಿತಾಧಿಕಾರಿಗಳು ಹೆರಿಗೆ ಕೋಣೆಗಳಿಗೆ ಮತ್ತು ಶಸ್ತ್ರ ಚಿಕಿತ್ಸಾ ಕೊಠಡಿಗಳಿಗೆ ದಿನಕ್ಕೆ 2 ಬಾರಿ ಕಡ್ಡಾಯವಾಗಿ ಭೇಟಿ ನೀಡಿ ಔಷಧಿ ಉಪಕರಣಗಳು, ಮಾನವ ಸಂಪನ್ಮೂಲಗಳ ಲಭ್ಯತೆ ಮತ್ತು ಸ್ವಚ್ಛತೆ ಕಾಪಾಡುವಿಕೆ ಬಗ್ಗೆ ಪರಿಶೀಲಿಸುವಂತೆ ಸೂಚಿಸಲಾಗಿದೆ.

9. ಆಸ್ಪತ್ರೆಗಳಲ್ಲಿ ಗರ್ಭಿಣಿಗೆ ಪ್ರಸವ ಪೂರ್ವ, ಪ್ರಸವ ಮತ್ತು ಪ್ರಸವ ನಂತರ ಅನುಸರಿಸಬೇಕಾದ ಮಾರ್ಗಸೂಚಿಯನ್ನು (Protocols) ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿರುತ್ತದೆ.

10. ತಾಯಿ ಕಾರ್ಡ ಗಳನ್ನು ಈ ಕೆಳಕಂಡ ಅಂಶಗಳೊಂದಿಗೆ ಪುನರ್ ವಿನ್ಯಾಸಗೊಳಿಸಲಾಗಿದೆ.

- ಜಸ್ಟೋಸಿಸ್ (Gestosis) ಸ್ಕೋರ್ ಮುಖಾಂತರ ತೊಡಕಿನ ಗರ್ಭಧಾರಣೆಗಳು (HRP) ವಿಧಾನ
- 8 ನೇ ತಿಂಗಳಲ್ಲಿ ಹೆರಿಗೆ ಸಿದ್ಧತೆ (Birth Planning) ಮಾಡುವುದು ಅಂದರೆ, ಯಾವ ಆಸ್ಪತ್ರೆಯಲ್ಲಿ ಹೆರಿಗೆ ಆಯೋಜಿಸಲಾಗುವುದು ಎಂದು ಮುಂಚಿತವಾಗಿ ಗುರುತಿಸುವುದು.
- ಸಹಜ ಹೆರಿಗೆಯಿಂದ ತಾಯಿ ಮತ್ತು ಮಗುವಿಗೆ ಪ್ರಯೋಜನಗಳ ಕುರಿತು ತಿಳಿಸುವುದು ಮತ್ತು ಅದರಿಂದ ಅನಗತ್ಯ ಸಿಸೇರಿಯನ್ ಚಿಕಿತ್ಸೆಯನ್ನು ತಡೆಯುವುದು.

11. ರಾಜ್ಯದ ಎಲ್ಲಾ ಹಂತದ ಪ್ರಸೂತಿ ತಜ್ಞರಿಗೆ ರಾಷ್ಟ್ರ ಮಟ್ಟದ ಪ್ರಸೂತಿ ತಜ್ಞರಿಂದ ಪುನರ್ ಮನನ ತರಬೇತಿಯನ್ನು ಈ ಕೆಳಕಂಡ ವಿಷಯಗಳ ಬಗ್ಗೆ ಈಗಾಗಲೆ ಕಳೆದ 2 ತಿಂಗಳಲ್ಲಿ ನೀಡಲಾಗಿರುತ್ತದೆ.

- ಸಹಜ ಹೆರಿಗೆ ಮತ್ತು ಇತ್ತೀಚಿನ ವಿದ್ಯಮಾನ
- ಪ್ರಸವ ಸಮಯದಲ್ಲಿನ ಅಧಿಕ ರಕ್ತ ಸ್ರಾವದ ಬಗ್ಗೆ
- ಗರ್ಭಿಣಿ ಮತ್ತು ಬಾಣಂತನದಲ್ಲಿ ಸಂಭವಿಸುವ ಅಧಿಕ ರಕ್ತದ ಒತ್ತಡ

12. ಮೂತ್ರ ತಪಾಸಣೆಯಲ್ಲಿ ಅಸಿಮ್‌ಟೋಮಾಟಿಕ್ ಬ್ಯಾಕ್ಟಿರೂರಿಯಾ (Asymptomatic Bacteruria) ಪತ್ತೆ ಹಚ್ಚಲು ಈಗಾಗಲೆ ಕೆಲವು ತಾಲ್ಲೂಕು ಆಸ್ಪತ್ರೆಗಳಲ್ಲಿ ಸೆಮಿ ಆಟೋಮಾಟಿಕ್ ಯುರಿನ್ Semi Automatic Urine Analyser) ಉಪಕರಣವು ಲಭ್ಯವಿದ್ದು, ಎಲ್ಲಾ ತಾಲ್ಲೂಕು ಆಸ್ಪತ್ರೆಗಳಿಗೆ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಿಗೆ ವಿಸ್ತರಿಸಲು ರಾಷ್ಟ್ರೀಯ ಆರೋಗ್ಯ ಅಭಿಯಾನದ ಅಡಿಯಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಇದರ ಮುಖಾಂತರ Pre-term birth (ಅವಧಿ ಮುನ್ನ ಹೆರಿಗೆ), IUGR (Intra Uterine Growth Retardation), ಇತ್ಯಾದಿಗಳಿಗೆ ಕಡಿವಾಣ ಹಾಕುವುದು.

13. ಎಲ್ಲಾ ತಾಲ್ಲೂಕು ಆಸ್ಪತ್ರೆಯ ರಕ್ತ ಶೇಖರಣಾ ಘಟಕದಲ್ಲಿ ರಕ್ತದ ವಿವಿಧ ಕಾಂಪೋನೆಂಟ್ಸ್ ಗಳನ್ನು ಶೇಖರಿಸಲು ಕ್ರಮ ಕೈಗೊಳ್ಳಲಾಗಿದ್ದು ಇದರಿಂದ ತಾಲ್ಲೂಕು ಆಸ್ಪತ್ರೆಗಳಲ್ಲಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಅಗತ್ಯಗಣುಗುಣವಾಗಿ ರಕ್ತದ ಪೂರೈಕೆಯನ್ನು ಮಾಡಲು ಯಶಸ್ವಿಯಾಗಲಿದೆ.

14. ಎಲ್ಲಾ ತಾಲ್ಲೂಕು ಆಸ್ಪತ್ರೆಗಳಿಗೆ ಕನಿಷ್ಠ 2 ಪ್ರಸೂತಿ ತಜ್ಞರು,2 ಅರವಳಿಕೆ ತಜ್ಞರು ಮತ್ತು ಒರ್ವ ಮಕ್ಕಳ ತಜ್ಞರು ಲಭ್ಯವಿರುವಂತೆ ಸರ್ಕಾರವು ನಿರ್ಧರಿಸಿದೆ, ಇದು ಸದ್ಯದಲ್ಲೆ ಅನುಷ್ಠಾನಗೊಳಿಸಲಾಗುವುದು.

15. ಎಲ್ಲಾ ಗರ್ಭಿಣಿಯರಲ್ಲಿ ಅಧಿಕ ರಕ್ತದೊತ್ತಡವನ್ನು ನಿಗಾವಹಿಸಲು ಹಾಗೂ ತಡೆಗಟ್ಟಲು ಎಲ್ಲಾ. ಕ್ರಮಗಳನ್ನು ಚಾಚು ತಪ್ಪದೆ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

16. ರಕ್ತಹೀನತೆಯಿಂದ ಬಳಲುತ್ತಿರುವ ಗರ್ಭಿಣಿ ಮತ್ತು ಬಾಣಂತಿಯರಿಗೆ ಎಲ್ಲಾ ರೀತಿಯ ಔಷಧಿಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ. ಅಲ್ಲದೇ, ರಕ್ತ ಹೀನತೆಯನ್ನು ತಡೆಗಟ್ಟಲು ಎಫ್ ಸಿ ಎಂ ಚುಚ್ಚುಮದ್ದನ್ನು ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಬಳಸಲು ಈಗಾಗಲೆ ಕ್ರಮ ಕೈಗೊಳ್ಳಲಾಗಿದೆ.

17. ಅಧಿಕ ರಕ್ತ ಸ್ರಾವವನ್ನು ತಡೆಗಟ್ಟಲು ನೂತನವಾದ ಔಷಧಿಗಳನ್ನು ಉದಾಹರಣೆಗೆ, ಕಾರ್ಬಿಟೋಸಿನ್ ಚುಚ್ಚು ಮದ್ದನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

18. ಎಲ್ಲಾ ಗರ್ಭಿಣಿ ಮತ್ತು ಬಾಣಂತಿಯರಿಗೆ ಪೌಷ್ಠಿಕತೆಯ ಬಗ್ಗೆ, ಮನೆಯಲ್ಲಿ ಸೇವಿಸಬೇಕಾದ ಆಹಾರದ ಬಗ್ಗೆ ಆಪ್ತ ಸಮಾಲೋಚನೆಯನ್ನು ಎಲ್ಲಾ ಹಂತದ ಆರೋಗ್ಯ ಕೇಂದ್ರಗಳಲ್ಲಿ ನೀಡಲಾಗುತ್ತಿದೆ. ಇದರಿಂದ ಪೌಷ್ಠಿಕಾಂಶದ ಆಹಾರದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

ಈ ಮೇಲ್ಕಂಡ ಎಲ್ಲಾ ಕ್ರಮಗಳಿಂದ ಜನವರಿ-2025 ಮತ್ತು ಫೆಬ್ರುವರಿ -2025 ರಲ್ಲಿ ತಾಯಿ ಮರಣಗಳ ಪ್ರಮಾಣದಲ್ಲಿ ಶೇ.30 ರಷ್ಟು ಇಳಿಕೆಯು ಕಂಡುಬಂದಿರುತ್ತದೆ.

ಉಪ ನಿರ್ದೇಶಕರು (ತಾಯಿ ಆರೋಗ್ಯ)
ಆರೋಗ್ಯ ಮತ್ತು ಕು.ಕ. ಸೇವೆಗಳ ನಿರ್ದೇಶನಾಲಯ
ಬೆಂಗಳೂರು-560 009